08-07-2024
Vijayavani
Pg 08

■ ಹರಳು ಬೆಳೆಯಲ್ಲಿ ಕುಡಿ ಚಿವುಟುವುದರಿಂದಾಗುವ ಅನುಕೂಲಗಳೇನು?

| ಆನಂದ್ ಹಾವೇರಿ



ಹರಳಿನಲ್ಲಿ ಅನವಶ್ಯಕ ಕವಲು ಕುಡಿಗಳನ್ನು ಆಗಿಂದಾಗ್ಗೆ ಚಿವುಟುತ್ತಿರಬೇಕು. ಇದರಿಂದ ಪ್ರಥಮ ಕಾಂಡದಲ್ಲಿ ಬರುವಂತಹ ಗೊಂಚಲು ದಷ್ಟ-ಪುಷ್ಟವಾಗಿ ಬರುತ್ತವೆ ಪ್ರಥಮ ಕಾಂಡದಿಂದ ಗೊಂಚಲಿನ ಕೆಳಭಾಗದಲ್ಲಿರುವ ಒಂದೇ ಒಂದು ಕುಡಿಯನ್ನು ಬೆಳೆಯಲು ಬಿಟ್ಟು ಉಳಿದೆಲ್ಲ ಕುಡಿಗಳನ್ನು ಚಿವುಟುವುದು. ಅನಂತರ ದ್ವಿತೀಯ ಕವಲು ಕಾಂಡದ ತುದಿಯಲ್ಲಿ ಇನ್ನೊಂದು ಗೊನೆ ಬರಲು ಬಿಟ್ಟು. ತದನಂತರ ದ್ವಿತೀಯ ಗೊಂಚಲಿನ ಬುಡದಲ್ಲಿ ಇನ್ನೊಂದು ತೃತೀಯ ಕವಲನ್ನು ಬಿಟ್ಟು ಉಳಿದೆಲ್ಲ ಕವಲು ಕುಡಿಗಳನ್ನು ಚಿವುಕಿ ಹಾಕುವುದು. ತೃತೀಯ ಕವಲಿನಿಂದಲೂ ತುದಿಯಲ್ಲಿ ಮತ್ತೊಂದು ಗೊಂಚಲು ಬರುತ್ತದೆ. ಅದನ್ನು ಬೆಳೆಯಲು ಬಿಡುವುದು. ಈ ರೀತಿ ತೃತೀಯ ಗೊಂಚಲಿನ ಒಂದೊಂದು, ಚತುರ್ಥ ಮತ್ತು ಪಂಚಮ ಕವಲುಗಳನ್ನು ಬೆಳೆಸಿಕೊಂಡು ಮಳೆಯ ಅವಧಿಗನುಸಾರವಾಗಿ, ಬೆಳೆಸಬೇಕಾದ ಗೊಂಚಲುಗಳ ಸಂಖ್ಯೆಗಳನ್ನು (ಗರಿಷ್ಠ 6) ನಿರ್ಧರಿಸಿಕೊಳ್ಳುವುದು. ಹರಳಿನಲ್ಲಿ ಕುಡಿ ಚಿವುಟುವಿಕೆಯನ್ನು ಬಿತ್ತಿದ 45-50 ದಿನಗಳಲ್ಲಿ ಶಿಫಾರಸಿನಂತೆ ಕೈಗೊಳ್ಳುವುದರಿಂದ ಹೆಚ್ಚಿನ ಆದಾಯ ಪಡೆಯಬಹುದು. ಹರಳಿನಲ್ಲಿ ಕುಡಿ ಚಿವುಟುವುದರಿಂದ ಶೇ. 50-60 ಇಳುವರಿ ಹೆಚ್ಚಿಸಬಹುದು.

| ಡಾ. ಕೆ.ಪಿ.ರಘುಪ್ರಸಾದ್ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

■ ಆಂಥುರಿಯಂ ಗಿಡಗಳನ್ನು ಬೆಳೆಯುವುದು ಹಾಗೂ ಅದರ ನಿರ್ವಹಣೆ ಹೇಗೆ?

ಆಂಥುರಿಯಂನ ಆಕರ್ಷಕ ಎಲೆಗಳು, ಹೂವಿನ ವಿಶಿಷ್ಟ ಆಕಾರ, ಹೊಳೆವ ಬಣ್ಣ ಮತ್ತು ಹೂದನಿಯಲ್ಲಿ ಹೆಚ್ಚು ದಿನಗಳ ಕಾಲ ಅಲಂಕಾರಕ್ಕಾಗಿ ಇಡಬಹುದಾದ್ದರಿಂದ ಇದನ್ನು ಕುಂಡಗಳಲ್ಲಿ ಬೆಳೆಸಿ ಅಲಂಕಾರಕ್ಕಾಗಿ ಉಪಯೋಗಿಸಬಹುದು. ಆಂಥುರಿಯಂ ಅನ್ನು ಉತ್ತಮವಾಗಿ ಬೆಳೆಸಲು ಉಷ್ಣಾಂಶ 25-28 ಡಿ.ಸೆ. ಮತ್ತು ಆರ್ದ್ರತೆ ಶೇ.75-80 ಇದ್ದರೆ ಸೂಕ್ತ. ತೆಂಗಿನನಾರು: ಮಣ್ಣು: ಸಾವಯವ ಗೊಬ್ಬರ: ಮರಳು (3:1:1:1) ಮಾಧ್ಯಮದಲ್ಲಿ ಇದನ್ನು ಬೆಳೆಯಬಹುದು. ಮಾಧ್ಯಮದ ರಸಸಾರ 5 ರಿಂದ 6.5 ಇರುವುದು ಉತ್ತಮ. ಅಲ್ಲದೆ ಕೇವಲ ತೆಂಗಿನಕಾಯಿಯ ಚಿಪ್ಪು / ನಾರು, ಕೊಕೊಪೀಟ್ ಮಾಧ್ಯಮದಲ್ಲೂ ಬೆಳೆಯಬಹುದು. ಸಸ್ಯಗಳಿಗೆ 5-6 ವರ್ಷ ವಯಸ್ಸಾದಾಗ ಸಸ್ಯದ ಕಾಂಡವನ್ನು ಬೇರು ಸಮೇತ ಬಿಡಿಸಿ ಹೊಸ ಗಿಡಗಳನ್ನು ಪಡೆಯಬಹುದು. ಪ್ರತಿ ದಿನ ನೀರು ನೀಡತಕ್ಕದ್ದು. ಜತೆಗೆ ಪೋಷಕಾಂಶಗಳನ್ನು ಒದಗಿಸಲು ಕಾಂಪೋಸ್ಟ್ ಹಾಗೂ ಇತರ ಸಾವಯವ ಗೊಬ್ಬರಗಳನ್ನು ಬಳಸತಕ್ಕದ್ದು. ಪ್ರತಿ ಗಿಡದಿಂದ ವರ್ಷಕ್ಕೆ 8-10 ಗುಣಮಟ್ಟದ ಹೂಗಳನ್ನು ಪಡೆಯಬಹುದು.



| ಡಾ. ಎಂ. ಶಾಲಿನಿ ತೋಟಗಾರಿಕೆ ತಜ್ಞರು

■ ನೆಲಗಡಲೆ ಬೆಳೆಯಲ್ಲಿ ಕಂಡುಬರುವ ಕಂಬಳಿ ಹುಳುವಿನ ನಿರ್ವಹಣೆ ಹೇಗೆ?

| ಲಿಂಗರಾಜು ಪಾವಗಡ



ಮರಿ ಹುಳುಗಳು ಪ್ರಾರಂಭದಲ್ಲಿ ಗುಂಪುಗೂಡಿ ಎಲೆಗಳನ್ನು ಕೆರೆದು ತಿನ್ನುತ್ತವೆ. ಅಂತಹ ಎಲೆಗಳು ತೆಳ್ಳನೆಯ ಹಾಳೆ ಅಥವಾ ಜಾಲರಿ ಯಂತೆ ಕಂಡು ಉದುರುತ್ತವೆ. ನಂತರ ಬೆಳೆದ ಕಂಬಳಿ ಹುಳುಗಳು ಎಲೆ ಮತ್ತು ಗಿಡದ ಮೃದು ಭಾಗವನ್ನು ತಿಂದು ನಾಶಪಡಿಸುತ್ತವೆ.

**ನಿರ್ವಹಣೆ:** ಸಾಮೂಹಿಕ ಹತೋಟಿ ಹೆಚ್ಚು ಪರಿಣಾಮಕಾರಿ. ಮುಂಗಾರು ಮಳೆಯ ನಂತರ ಭೂಮಿಯನ್ನು ಆಳವಾಗಿ ಉಳುಮೆ ಮಾಡುವುದು. ದೀಪದ ಬೆಳಕಿಗೆ ಪತಂಗಗಳು ಆಕರ್ಷಿತಗೊಳ್ಳುವುದರಿಂದ ಸಾಯಂಕಾಲ 7 ರಿಂದ 11 ಗಂಟೆಯವರೆಗೂ ಪೆಟ್ರೋಮ್ಯಾಕ್ಸ್ ದೀಪವನ್ನಿಟ್ಟು ಪತಂಗಗಳನ್ನು ಆಕರ್ಷಿಸಿ, ನಂತರ ನಾಶಪಡಿಸುವುದು. ಹೊಲದ ಸುತ್ತ 5ರಿಂದ 6 ಸಾಲು ಎಳ್ಳು, ಹೆಸರು ಬೆಳೆಗಳನ್ನು ಅಕ್ಕಡಿ ಬೆಳೆಯಾಗಿ (8:2) ಅನುಪಾತದಲ್ಲಿ ಬೆಳೆಯುವುದು. ಕಂಬಳಿ ಹುಳುಗಳ ಬಲೆ ಬೆಳೆಯ ಮೇಲೆ ಕಾಣಿಸಿಕೊಂಡಾಗ ಎಕರೆಗೆ 4 ಕಿ.ಗ್ರಾಂ ಪೆನ್ವಲ್ರೇಟ್ 0.4 ಡಿ/ ಮ್ಯಾಲಾಥಿಯಾನ್ 5ಡಿ ಧೂಳೀಕರಿಸುವುದು.

| ಡಾ. ಕೆ.ಪಲ್ಲವಿ ಸಸ್ಯ ಸಂರಕ್ಷಣಾ ತಜ್ಞರು

08-07-2024
V-karnataka
Pg 05

# ಕರ್ನಾಟಕದಲ್ಲಿ ಹಿಗ್ಗಿದ ರಾಗಿ ಪ್ರದೇಶ

## ನಾಲ್ಕು ವರ್ಷಗಳಲ್ಲಿ 2.50 ಲಕ್ಷ ಹೆಕ್ಟೇರ್ ವಿಸ್ತರಣೆ

## ಹಳೇ ಮೈಸೂರು ಭಾಗದಲ್ಲೇ ಅತಿ ಹೆಚ್ಚು ಬೆಳೆ

■ **ಬಸವರಾಜ ಕೆ.ಜಿ.** ದಾವಣಗೆರೆ
basava.darshu@gmail.com

ರಾಜ್ಯದಲ್ಲಿ ಒಂದೆಡೆ ಆಹಾರ ಧಾನ್ಯಗಳ ಬೆಳೆ ಪ್ರದೇಶ ಕುಗ್ಗಿದ ಕೊರಗು ಕಾಡುತ್ತಿದ್ದರೆ, ಇನ್ನೊಂದೆಡೆ ಸಿರಿಧಾನ್ಯಗಳ ರಾಜ ರಾಗಿ ಬೆಳೆಯುವ ಪ್ರದೇಶ ಹಿಗ್ಗಿ ಕೊಂಚ ಸಮಾಧಾನ ತಂದಿದೆ. ರಾಜ್ಯಾದ್ಯಂತ 2019-20ರಿಂದ ಈಚೆಗೆ ರಾಗಿ ಬೆಳೆಯುವ ಪ್ರದೇಶ ಸುಮಾರು 2.50 ಲಕ್ಷ ಹೆಕ್ಟೇರ್‌ನಷ್ಟು ಹೆಚ್ಚಾಗಿದೆ.

**ಬರ ನಿರೋಧಕ ಬೆಳೆ:** ಕಳೆದ ವರ್ಷ ಬರಗಾಲವಿದ್ದರೂ ರಾಜ್ಯದಲ್ಲಿ 8.28 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ರೈತರು ರಾಗಿ ಬೆಳೆದಿದ್ದರು. ರಾಗಿ ಅತಿ ಕಡಿಮೆ ನೀರು ಬಯಸುವ ಬೆಳೆ. ಹೀಗಾಗಿ ಇದನ್ನು ಬರ ನಿರೋಧಕ ಬೆಳೆ ಎಂದೂ ಕರೆಯುತ್ತಾರೆ. ಅತಿ ಕಡಿಮೆ ನೀರುಂಡು ಬೆಳೆಯುವ ರಾಗಿಯ ಉತ್ತಮ ತಳಿ ಆಯ್ಕೆ ಮಾಡಿಕೊಂಡರೆ, ಎಕರೆಗೆ 15 ಕ್ವಿಂಟಾಲ್ ಇಳುವರಿ ಪಡೆಯಬಹುದು. ಎಕರೆಗೆ 40ರಿಂದ 50 ಸಾವಿರ ರೂ. ಲಾಭ ಗಳಿಸಬಹುದು.

**ಬೆಂಬಲ ಬೆಲೆ ಬಲ:** ಈ ಹಿಂದೆ 2019ರಲ್ಲಿ ರಾಜ್ಯ ಸರಕಾರ ಘೋಷಿಸಿದ್ದ 'ರೈತ ಸಿರಿ' ಯೋಜನೆಯಿಂದ ರಾಜ್ಯದಲ್ಲಿ ರಾಗಿ ಬೆಳೆ ಬಿತ್ತನೆ ವ್ಯಾಪ್ತಿ ಹಿಗ್ಗಿತ್ತು. ಪ್ರಸ್ತುತ ಸರಕಾರ ರಾಗಿಗೆ ಬೆಂಬಲ ಬೆಲೆ ಘೋಷಿಸಿ, ಖರೀದಿ ಕೇಂದ್ರ ತೆರೆದಿರುವ ಕಾರಣ ಹೆಚ್ಚು ರೈತರು ರಾಗಿ ಬೆಳೆಯತ್ತ ವಾಲುತ್ತಿದ್ದಾರೆ. ಪ್ರತಿ ಕ್ವಿಂಟಾಲ್ ರಾಗಿಗೆ 3,846 ರೂ. ಬೆಂಬಲ ಬೆಲೆ ನಿಗದಿ ಮಾಡಲಾಗಿದೆ. ಬರದ ನಾಡಾಗಿರುವ ಚಿತ್ರದುರ್ಗ, ಮಧ್ಯ ಕರ್ನಾಟಕದ ದಾವಣಗೆರೆ ಸೇರಿ ಕಡಿಮೆ ಮಳೆ ಬೀಳುವ ಜಿಲ್ಲೆಗಳ ಭೂಮಿಯಲ್ಲೂ ರಾಗಿ ಕಂಗೊಳಿಸುತ್ತಿದೆ. 'ಇತರ ಸಿರಿಧಾನ್ಯಗಳಂತೆ ರಾಗಿ ಬೆಳೆಯುವ ರೈತರಿಗೂ ಪ್ರೋತ್ಸಾಹ ಧನ ನೀಡಿದರೆ ರಾಗಿ ಬೆಳೆಯುವ ಪ್ರದೇಶ ಮತ್ತಷ್ಟು ಹಿಗ್ಗುತ್ತದೆ' ಎನ್ನುತ್ತಾರೆ ಜಗಳೂರಿನ ರೈತ ಪರಮೇಶ್ವರಪ್ಪ.



**4 ವರ್ಷದ ರಾಗಿ ಪ್ರದೇಶ**

| ವರ್ಷ | ಬಿತ್ತನೆ (ಹೆಕ್ಟೇರ್) |
|---|---|
| 2019-20 | 6.74 ಲಕ್ಷ |
| 2020-21 | 8.01 ಲಕ್ಷ |
| 2021-22 | 8.64 ಲಕ್ಷ |
| 2022-23 | 8.28 ಲಕ್ಷ |
| 2023-24 | 8.28 ಲಕ್ಷ (ಗುರಿ) |

**ಜಿಲ್ಲೆಗಳಲ್ಲಿ ರಾಗಿ ಬಿತ್ತನೆ ಗುರಿ**

| ಜಿಲ್ಲೆ | ಬಿತ್ತನೆ ಗುರಿ (ಹೆಕ್ಟೇರ್) |
|---|---|
| ರಾಜ್ಯ | 8.28 ಲಕ್ಷ |
| ತುಮಕೂರು | 1.52 ಲಕ್ಷ |
| ರಾಮನಗರ | 71,000 |
| ಕೋಲಾರ | 60,973 |
| ಮೈಸೂರು | 60,000 |

ರಾಗಿ ಲಾಭದಾಯಕ ಬೆಳೆ. ಕೂರಿಗೆ ಬಳಸಿ ರಾಗಿ ಬಿತ್ತನೆ ಮಾಡುವುದು ಸಾಮಾನ್ಯ. ಆದರೆ, ರಾಗಿ ನಾಟಿ ಮಾಡಿದರೆ ಎಕರೆಗೆ 20 ಕ್ವಿಂಟಾಲ್‌ವರೆಗೂ ಇಳುವರಿ ಪಡೆಯುವ ಅವಕಾಶವಿದೆ. ಬೆಂಬಲ ಬೆಲೆ ಇರುವುದರಿಂದ ಎಕರೆಗೆ 40 ಸಾವಿರ ರೂ. ಲಾಭ ಗಳಿಸಬಹುದು.

- **ಶ್ರೀನಿವಾಸ ಚಿಂತಾಲ್** ಕೃಷಿ ಜಂಟಿ ನಿರ್ದೇಶಕ, ದಾವಣಗೆರೆ

**ರಾಗಿ ಬಿತ್ತನೆ ಚುರುಕು**

ರಾಜ್ಯದಲ್ಲಿ ಮುಂಗಾರು ಉತ್ತಮವಾಗಿದೆ. ದಕ್ಷಿಣದ ಜಿಲ್ಲೆಗಳು, ಹಳೇ ಮೈಸೂರು ಭಾಗದಲ್ಲಿ ವಾಡಿಕೆಯಂತೆ ಮಳೆಯಾಗುತ್ತಿದ್ದು, ರೈತರು ಬಿತ್ತನೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ, ಮೈಸೂರು ಚಾಮರಾಜನಗರ ಜಿಲ್ಲೆಗಳಲ್ಲಿ ಈಗಷ್ಟೇ ಬಿತ್ತನೆ ಆರಂಭವಾಗಿದ್ದು, ರಾಜ್ಯಾದ್ಯಂತ ಶೇ.10ರ ಆಸುಪಾಸು ಬಿತ್ತನೆ ವರದಿಯಾಗಿದೆ. ಜುಲೈ ಎರಡನೇ ವಾರದಿಂದ ರಾಗಿ ಬಿತ್ತನೆ ಚುರುಕಾಗಲಿದೆ.

# ದಪ್ಪ ಅಕ್ಷರಗಳಲ್ಲಿ ಸಕ್ಕರೆ, ಉಪ್ಪಿನ ಅಂಶಗಳ ನಮೂದು ಕಡ್ಡಾಯ

**ಹೊಸದಿಲ್ಲಿ:** ಪ್ಯಾಕ್ ಮಾಡಿದ ಆಹಾರ ಉತ್ಪನ್ನಗಳಲ್ಲಿ ಬಳಸಲಾಗಿರುವ ಪದಾರ್ಥಗಳು ಹಾಗೂ ಅವುಗಳಲ್ಲಿರುವ ಪೋಷಕಾಂಶಗಳು ಸೇರಿದಂತೆ ಇತರ ಅಗತ್ಯ ಮಾಹಿತಿಗಳನ್ನು ಗ್ರಾಹಕರಿಂದ ಮರೆಮಾಚುವಂತಿಲ್ಲ. ಉತ್ಪನ್ನಗಳಲ್ಲಿನ ಪದಾರ್ಥಗಳ ಪ್ರಮಾಣದ ಕುರಿತಾಗಿ ಮಾಹಿತಿಯನ್ನು ದಪ್ಪ ಅಕ್ಷರಗಳಲ್ಲಿ ಮುದ್ರಿಸುವುದನ್ನು ಕಡ್ಡಾಯ ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ತಿಳಿಸಿದೆ. ಈ ಸಂಬಂಧ ಪ್ರಾಧಿಕಾರವು ಕರಡು ಅಧಿಸೂಚನೆ ಪ್ರಕಟಿಸಿದೆ.




ಆಹಾರ ಉತ್ಪನ್ನಗಳ ಪೊಟ್ಟಣಗಳ ಮೇಲೆ ಶೇಕಡಾವಾರು ಎಷ್ಟು ಪ್ರಮಾಣದಲ್ಲಿ ಉಪ್ಪು, ಸಕ್ಕರೆ ಮತ್ತು ಕೊಬ್ಬಿನಾಂಶ ಇದೆ ಎಂಬ ಬಗೆಗಿನ ಸಂಖ್ಯೆಗಳನ್ನೂ ದಪ್ಪ ಅಕ್ಷರಗಳಲ್ಲಿ ಮುದ್ರಿಸಬೇಕಿದೆ. ಈ ಕುರಿತು ಅಭಿಪ್ರಾಯ ಸಲ್ಲಿಸಲು ತಜ್ಞರಿಗೆ ಹಾಗೂ ಸಂಬಂಧಿತ ಇಲಾಖೆಗಳಿಗೆ ಎಫ್‌ಎಸ್‌ಎಸ್‌ಎಐ ಕೋರಿದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ (ಲೇಬಲಿಂಗ್ ಮತ್ತು ಡಿಸ್‌ಪ್ಲೇ) ನಿಯಮಾವಳಿ 2020ಕ್ಕೆ ತಿದ್ದುಪಡಿ ತರಲಾಗಿದೆ. ಇತ್ತೀಚೆಗೆ ಪ್ರಾಧಿಕಾರದ ಅಧ್ಯಕ್ಷ ಅಪೂರ್ವ ಚಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ 44ನೇ ಸಭೆಯಲ್ಲಿ ಈ ಕುರಿತು ಚರ್ಚಿಸಿ ಕರಡು ಅಧಿಸೂಚನೆ ಪ್ರಕಟಿಸಲಾಗಿದೆ.

ಗ್ರಾಹಕರು ತಾವು ಬಳಸುವ ಆಹಾರದ ಪೊಟ್ಟಣಗಳಲ್ಲಿ ಇರುವ ಪೋಷಕಾಂಶಗಳ ಮೌಲ್ಯದ ಬಗ್ಗೆ ತಿಳಿದುಕೊಳ್ಳಬೇಕು. ಈ ಪದಾರ್ಥಗಳು ಆರೋಗ್ಯಕರವಾಗಿವೆಯೇ ಎಂಬ ಬಗ್ಗೆ ಖಚಿತಪಡಿಸಿಕೊಳ್ಳುವುದು ಗ್ರಾಹಕರ ಹಕ್ಕು. ಅದನ್ನು ಅವರು ಚೆನ್ನಾಗಿ ಅರಿತುಕೊಳ್ಳುವ ಅಗತ್ಯವಿದೆ. ಇದಕ್ಕೆ ನೆರವಾಗಲು ತಿದ್ದುಪಡಿ ತರಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

**08-07-2024**
**V-karnataka Pg 09**

ಈರುಳ್ಳಿ ಬಿತ್ತನೆ ಗುರಿ ಶೇ 27ರಷ್ಟು ಏರಿಕೆ

# ಆಲೂಗೆಡ್ಡೆ ಬಿತ್ತನೆ ಚುರುಕು

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ವಿವಿಧೆಡೆ ಉತ್ತಮ ಮಳೆ ಸುರಿಯುತ್ತಿರುವುದರಿಂದ ಮುಂಗಾರು ಹಂಗಾಮಿನಲ್ಲಿ ಈರುಳ್ಳಿ ಮತ್ತು ಆಲೂಗೆಡ್ಡೆ ಬಿತ್ತನೆಯು ಚುರುಕುಗೊಂಡಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ.



ಸದ್ಯ ಬೆಳೆಗಾರರು ದಾಸ್ತಾನು ಇಟ್ಟಿದ್ದ ಈರುಳ್ಳಿ ಮತ್ತು ಆಲೂಗೆಡ್ಡೆಯು ಮಾರುಕಟ್ಟೆ ಪ್ರವೇಶಿಸಿದೆ. ಹಾಗಾಗಿ, ಈ ಎರಡರ ಬೆಲೆಯು ಸ್ಥಿರವಾಗಿದೆ ಎಂದು ಹೇಳಿದೆ.

ಮಳೆ ಸುರಿಯುತ್ತಿರುವುದರಿಂದ ವಾತಾವರಣದಲ್ಲಿ ತೇವಾಂಶ ಹೆಚ್ಚಿರುತ್ತದೆ. ಇದರಿಂದ ಈರುಳ್ಳಿ ದಾಸ್ತಾನಿಟ್ಟಿರುವ ರೈತರಿಗೆ ನಷ್ಟ ಕಟ್ಟಿಟ್ಟಬುತ್ತಿ. ಹಾಗಾಗಿ, ಹಿಂಗಾರು ಅವಧಿಯಲ್ಲಿ ಕಟಾವು ಮಾಡಿದ್ದ ಈರುಳ್ಳಿಯು ಮಾರುಕಟ್ಟೆಯಲ್ಲಿ ಅವಕವಾಗುತ್ತಿದೆ ಎಂದು ತಿಳಿಸಿದೆ.

ಮುಂಗಾರು ಋತುವಿನಲ್ಲಿ 3.61 ಲಕ್ಷ ಹೆಕ್ಟೇರ್‌ನಲ್ಲಿ ಈರುಳ್ಳಿ ಬಿತ್ತನೆಯ ಗುರಿ ಹೊಂದಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಬಿತ್ತನೆ ಪ್ರದೇಶದಲ್ಲಿ ಶೇ 27ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಹಿಂಗಾರು ಋತುವಿನಲ್ಲಿ ಹೆಚ್ಚಾಗಿ ಆಲೂಗೆಡ್ಡೆ ಬೆಳೆಯಲಾಗುತ್ತದೆ. ಆದರೆ, ಕರ್ನಾಟಕ, ಹಿಮಾಚಲ ಪ್ರದೇಶ, ಉತ್ತರಾಖಂಡ, ಮೇಘಾಲಯ, ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಮುಂಗಾರು ಅವಧಿಯಲ್ಲಿ ಬಿತ್ತನೆ ಮಾಡುವುದು ಹೆಚ್ಚು. ಈ ಫಸಲು ಸೆಪ್ಟೆಂಬರ್–ನವೆಂಬರ್‌ನಲ್ಲಿ ಮಾರುಕಟ್ಟೆಗೆ ಪೂರೈಕೆಯಾಗುತ್ತದೆ ಎಂದು ವಿವರಿಸಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಮುಂಗಾರಿನಲ್ಲಿ ಆಲೂಗೆಡ್ಡೆ ಬಿತ್ತನೆ ಪ್ರದೇಶದಲ್ಲಿ ಶೇ 12ರಷ್ಟು ಏರಿಕೆಯಾಗಿದೆ. ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದಲ್ಲಿ ನಿಗದಿತ ಬಿತ್ತನೆ ಪೂರ್ಣಗೊಂಡಿದೆ. ಕರ್ನಾಟಕ ಸೇರಿ ಇತರೆ ರಾಜ್ಯಗಳಲ್ಲಿ ಬಿತ್ತನೆ ಪ್ರಕ್ರಿಯೆ ಉತ್ತಮವಾಗಿದೆ. ಹಿಂಗಾರು ಅವಧಿಯಲ್ಲಿ 273 ಲಕ್ಷ ಟನ್‌ನಷ್ಟು ಆಲೂಗೆಡ್ಡೆಯನ್ನು ಶೈತ್ಯಾಗಾರದಲ್ಲಿ ದಾಸ್ತಾನು ಮಾಡಲಾಗಿದೆ. ಹಾಗಾಗಿ, ಮಾರುಕಟ್ಟೆಯಲ್ಲಿ ಅಭಾವ ತಲೆದೋರುವುದಿಲ್ಲ ಎಂದು ವಿವರಿಸಿದೆ.

ದೇಶದಲ್ಲಿ ಕಳೆದ ವರ್ಷ ಈರುಳ್ಳಿ ಮತ್ತು ಆಲೂಗೆಡ್ಡೆ ಉತ್ಪಾದನೆ ಇಳಿಕೆಯಾಗಿತ್ತು. ಇದರಿಂದ ಪ್ರಸಕ್ತ ವರ್ಷ ಮಾರುಕಟ್ಟೆಯಲ್ಲಿ ಇವುಗಳ ಧಾರಣೆ ಏರಿಕೆಯಾಗಿತ್ತು. ಬೇಸಿಗೆಯಲ್ಲಿ ಬಿಸಿಲ ಝಳ ಹೆಚ್ಚಳ ಮತ್ತು ಜಲಾಶಯಗಳಲ್ಲಿ ನೀರಿನ ಸಂಗ್ರಹ ಮಟ್ಟ ಕಡಿಮೆ ಇತ್ತು. ಹಾಗಾಗಿ ಬೆಂಡೆಕಾಯಿ, ಸೋರೆಕಾಯಿ, ಬೀನ್ಸ್ ಮತ್ತು ಎಲೆಕೋಸು ಬೆಲೆಯಲ್ಲಿ ಏರಿಕೆಯಾಗಿತ್ತು. ಗ್ರಾಹಕರು ಆಲೂಗೆಡ್ಡೆ, ಈರುಳ್ಳಿ, ಟೊಮೆಟೊ ಬಳಕೆಯತ್ತ ಚಿತ್ತ ನೆಟ್ಟಿದ್ದರಿಂದ ಇವುಗಳ ಬೆಲೆಯಲ್ಲಿ ಏರಿಕೆಯಾಗಿತ್ತು ಎಂದು ವಿವರಿಸಿದೆ.

**08-07-2024**
**Prajavani Pg 10**

**08-07-2024**
**Hosadiganta Pg 09**

# ಸೈನಿಕ ಹುಳು ಬಾಧೆಗೆ ಕಂಗಾಲು

## ಜಿಲ್ಲೆಯಲ್ಲಿ ಆಹಾರ ಬೆಳೆಗಳಿಗೆ ಸೈನಿಕ ಹುಳು ಹಾವಳಿ | ರೈತರಿಗೆ ಕಡಿಮೆ ಇಳುವರಿ ಆತಂಕ

• ಎಚ್.ಬಿ.ಸುಪ್ರತೀಕ್

**ತುಮಕೂರು:** ಜಿಲ್ಲೆಯಲ್ಲಿ ಮುಸುಕಿನ ಜೋಳದ ಬೆಳೆಗೆ ಅಲ್ಲಲ್ಲಿ ಸೈನಿಕ ಹುಳುವಿನ ಬಾಧೆ ಕಂಡು ಬಂದಿದ್ದು, ಈ ಕೀಟವು ಮುಸುಕಿನ ಜೋಳ ಬೆಳೆಯಲ್ಲದೆ ರಾಗಿ, ಭತ್ತ ಮುಂತಾದ ಬೆಳೆಗಳಿಗೂ ಹಾನಿ ಮಾಡುವ ಸಾಧ್ಯತೆ ಇದ್ದು ರೈತರಿಗೆ ತಲೆನೋವಾಗಿ ಪರಿಣಮಿಸಿದೆ. ಜಿಲ್ಲೆಯಲ್ಲಿ 30,578 ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನ ಜೋಳ ಬಿತ್ತನೆ ಗುರಿಯಿದ್ದು, ಈಗಾಗಲೇ ಕೊರಟಗೆರೆ, ಮಧುಗಿರಿ, ಪಾವಗಡ, ಶಿರಾ ಹಾಗೂ ತಿಪಟೂರು ತಾಲ್ಲೂಕಿನ ಸುಮಾರು 4,679 ಹೆ.ಪ್ರದೇಶದಲ್ಲಿ ಬಿತ್ತನೆಯಾಗಿದೆ. ಮುಖ್ಯವಾಗಿ ಬೆಳೆಗಳ ಎಲೆ, ಕಾಂಡ ತಿನ್ನುವುದಲ್ಲದೆ ಎಲೆಯ ಭಾಗದಲ್ಲಿಸರಣಿ ರಂಧ್ರಗಳನ್ನು ಕೊರೆಯುವುದರಿಂದ ಬೆಳೆಗೆ ತೀವ್ರ ಹಾನಿಯುಂಟಾಗುತ್ತದೆ. ಇದರಿಂದಾಗಿ ಇಳುವರಿ ಕಡಿಮೆ ಆಗಿ ರೈತರು ನಷ್ಟ ಅನುಭವಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ.

**ಹತೋಟಿ ಕ್ರಮಗಳು:** ಸೈನಿಕ ಹುಳುಗಳು ಗುಂಪಾಗಿ ಇಟ್ಟಿರುವ ಮೊಟ್ಟೆಗಳನ್ನು ಕೈಯಿಂದ ಆಯ್ದು ನಾಶ ಪಡಿಸಬೇಕು. ಮುಂಜಾಗ್ರತ ಕ್ರಮವಾಗಿ ತಿಂಗಳಿಗೊಮ್ಮೆ ಒಂದು ಲೀಟರ್ ನೀರಿಗೆ 0.5 ಮಿಲಿ ಲೀಟರ್ ಅಜಾಡಿರೆಕ್ಟಿನ್(ಬೇವಿನ ಮೂಲದ ಕೀಟನಾಶಕ) ಬೆರೆಸಿ ಸಿಂಪಡಿಸಬೇಕು.



ಇಮೊಮೆಕ್ಟಿನ್ ಬೆಂಜೊಯೇಟ್ 0.4 ಗ್ರಾಂ ಅಥವಾ ಸ್ಪೈನೋಟೋರಮ್ 1 ಮಿ.ಲೀ. ಅಥವಾ ಥಯೋಡಿಕಾರ್ಬ್ 2 ಗ್ರಾಂ ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿ ಗಿಡಗಳ ಸು… ಸಿಂಪಡಿಸಬೇಕು.

ಮುಸುಕಿನ ಜೋಳ ಬಿತ್ತನೆಯಾ… ದಿನದೊಳಗೆ ಮೊದಲ ಸಿಂಪಡಣೆ ಹಾಗೂ ಮೊದಲನೆ ಸಿಂಪಡಣೆಯ 10 ರಿಂದ 15 ದಿನಗಳ ನಂತರ ಎರಡನೇ ಸಿಂಪಡಣೆ ಮಾಡಬೇಕು.

ಬೆಳಿಗ್ಗೆ ಅಥವಾ ಸಾಯಂಕಾಲದ ಸಮಯದಲ್ಲಿ ಹುಳುಗಳು ಹೆಚ್ಚು ಕ್ರಿಯಾಶೀಲವಾಗಿರುವುದರಿಂದ ಕೀಟನಾಶಕವನ್ನು ಸಿಂಪಡಿಸಬೇಕು. ಪ್ರತಿ ಸಲ ಸಿಂಪಡಣೆಗೆ ಕೀಟನಾಶಕಗಳನ್ನು ಬದಲಾಯಿಸಿ ಬಳಸಬೇಕು. ಸೂಕ್ತ ಸಸ್ಯ ಸಂರಕ್ಷಣಾ ಕ್ರಮಗಳನ್ನು ಸಕಾಲದಲ್ಲಿ ರೈತರು ಅನುಸರಿಸುವುದರಿಂದ ಕೀಟವನ್ನು ಸಂಪೂರ್ಣ ಹತೋಟಿಗೆ ತರಬಹುದು ಎಂದು ಜಂಟಿ ಕೃಷಿ ನಿರ್ದೇಶಕ ರಮೇಶ್ ರೈತರಿಗೆ ಮಾಹಿತಿ ತಿಳಿಸಿದ್ದಾರೆ.

### ಲಕ್ಷಣಗಳು

ಸೈನಿಕ ಹುಳುವಿನ ಪ್ರೌಢ ಚಿಟ್ಟೆಯು ನಾಲ್ಕೈದು ಗುಂಪುಗಳಲ್ಲಿ ಎಲೆಗಳ ಕೆಳಭಾಗದಲ್ಲಿ 1,500ರವರೆಗೆ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಯಿಂದ ಹೊರಬಂದ ಮರಿಹುಳುಗಳು ಎಲೆಯನ್ನು ಕೆರೆದು ತಿನ್ನುವುದರಿಂದ ಎಲೆಯು ಹರಿದ ರೀತಿಯಲ್ಲಿ ಬಾಧಿಸುವುದರಿಂದ ಗಿಡದ ಬೆಳವಣಿಗೆ ಕುಂಠಿತವಾಗುತ್ತದೆ. ಗಿಡದ ಸುಳಿಯನ್ನು ಕೊರೆಯುತ್ತದೆ. ಇದರಿಂದ ಎಲೆಗಳು ಹೊರಬಂದಾಗ ಗರಿಯಲ್ಲಿ ಸರಣಿಯಾಗಿ ರಂಧ್ರಗಳು ಕಂಡು ಬರುತ್ತವೆ. ಮುಸುಕಿನ ಜೋಳದಲ್ಲಿ ಸೈನಿಕ ಹುಳು ಬಾಧೆ ನಿಯಂತ್ರಣಕ್ಕೆ ಅನುಸರಿಸಬೇಕಾದ ಸಸ್ಯ ಸಂರಕ್ಷಣಾ ಕ್ರಮಗಳ ಬಗ್ಗೆ ಕೃಷಿ ಇಲಾಖೆಯು ರೈತರಿಗೆ ಸಲಹೆ ನೀಡಿದೆ.

**06-07-2024**
**Hosadiganta**
**Pg 07**

